ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	106
ಸದಸ್ಯರ ಹೆಸರು	ಶ್ರೀ ತೇಜಸ್ವಿನಿ ಗೌಡ
ಉತ್ತರಿಸುವ ದಿನಾಂಕ	16-02-2022
ಉತ್ತರಿಸುವವರು	ಮಾನ್ಯ ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಹಿಂದೂ ದೇವಾಲಯಗಳ ಆಸ್ತಿಗೆ ಸಂಬಂಧಿಸಿದ ದೇವರನ್ನ ಒಡೆಯ (ಮಾಲೀಕ)ರನ್ನಾಗಿ ಪರಿಗಣಿಸಬೇಕೆಂಬ ಭಕ್ತರ ಬೇಡಿಕೆಯನ್ನು ಪರಿಗಣಿಸಿ ದಾಖಲೆ ಮಾಡಲಾಗಿದೆಯೇ:	ರಾಜ್ಯದಲ್ಲಿರುವ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಹಿಂದೂ ದೇವಾಲಯಗಳ ಆಸ್ತಿಗೆ ಸಂಬಂಧಿಸಿದ ದೇವರನ್ನ ಒಡೆಯ (ಮಾಲೀಕ)ರನ್ನಾಗಿ ಪರಿಗಣಿಸಿ ಈ ಹಿಂದಿನಿಂದಲೂ ದಾಖಲೆ ಮಾಡಲಾಗಿರುತ್ತದೆ.
ಆ)	ಈ ಸಂಬಂಧ ಕಂದಾಯ ಇಲಾಖೆಯಿಂದ ಏನಾದರೂ ತೊಡಕುಗಳು ಇವೆಯೇ: ಇದ್ದಲ್ಲಿ, ಸರ್ಕಾರದೊಂದಿಗೆ ಸಮಾಲೋಚಿಸಿ ಪರಿಹಾರ ಪಡೆಯಲಾಗಿದೆಯೇ:	ಈ ಸಂಬಂಧ ಅಧಿಸೂಚಿತ ದೇವಸ್ಥಾನಗಳ ಸ್ವತ್ತುಗಳ ಅಳತೆ ಕಾರ್ಯ, ದಾಖಲೀಕರಣ ಮತ್ತು ಸ್ವತ್ತುಗಳ ಇಂಡೀಕರಣ ಮಾಡಲಾಗುತ್ತಿದೆ. ಈ ಕುರಿತಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ(ಮುಜರಾಯಿ) ರವರು ದಿನಾಂಕ:11.11.2021ರಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಬರೆದ ಪತ್ರದಲ್ಲಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚಿತ ಪಟ್ಟಿಯಲ್ಲಿರುವ ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಧಾರ್ಮಿಕ ಸಂಸ್ಥೆಗಳ/ದೇವಾಲಯಗಳ ಹೆಸರು, ಅವುಗಳಿಗೆ ಸೇರಿದ ಜಮೀನುಗಳನ್ನು ಆರ್.ಟಿ.ಸಿ.ಯಲ್ಲಿ "ದೇವಾಲಯದ ಹೆಸರು"-"ಧಾರ್ಮಿಕ ಧತ್ತಿ ಇಲಾಖೆ" ಎಂದು ನಮೂದಿಸುವ ಕಾರ್ಯವನ್ನು ತಮ್ಮ ವೈಯುಕ್ತಿಕ ಗಮನಹರಿಸಿ ಜಿಲ್ಲಾ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುವಂತೆ ಸೂಚನೆ ನೀಡಿದ್ದು, ಪ್ರಸ್ತುತ ಈ ಕಾರ್ಯ ಪ್ರಗತಿಯಲ್ಲಿರುತ್ತದೆ.

<table>
<tr>
<td>ಇ)</td>
<td>ಮುಜರಾಯಿ 'ಎ' ವರ್ಗ 'ಬಿ' ವರ್ಗದ ದೇವಾಲಯಗಳಿಂದ ಬರುತ್ತಿರುವ ನಿರ್ದಿಷ್ಟ ಆದಾಯವೆಷ್ಟು: (ಖರ್ಚು ವೆಚ್ಚದ ವಿವರ ನೀಡುವುದು)</td>
<td>ಮುಜರಾಯಿ ಇಲಾಖೆಯ ಪ್ರವರ್ಗ 'ಎ' ಮತ್ತು 'ಬಿ' ದೇವಾಲಯಗಳಿಂದ 2020-21ನೇ ಸಾಲಿಗೆ ವಾರ್ಷಿಕ ಆದಾಯ ಒಟ್ಟು ರೂ.345.42 ಕೋಟಿಗಳಾಗಿರುತ್ತದೆ. ಪ್ರವರ್ಗವಾರು ವಿವರ ಕೆಳಗಿನಂತಿದೆ.
<table>
<tr><td>ಪ್ರವರ್ಗ</td><td colspan="3">2020-21</td></tr>
<tr><td></td><td>ಆದಾಯ</td><td>ವೆಚ್ಚ</td><td>ಉಳಿತಾಯ</td></tr>
<tr><td></td><td colspan="3">ಮೊತ್ತ ರೂ ಕೋಟಿಗಳಲ್ಲಿ</td></tr>
<tr><td>'ಎ'</td><td>331.11</td><td>282.29</td><td>48.82</td></tr>
<tr><td>'ಬಿ'</td><td>14.31</td><td>9.55</td><td>4.76</td></tr>
<tr><td>ಒಟ್ಟು</td><td>345.42</td><td>291.84</td><td>53.58</td></tr>
</table>
ವಾರ್ಷಿಕ ವರಮಾನವು ರೂ. ಐದು ಲಕ್ಷಗಳನ್ನು ಮೀರದ ಸಂಸ್ಥೆಗಳು ಪ್ರವರ್ಗ "ಸಿ" ದರ್ಜೆ ದೇವಾಲಯಗಳಾಗಿವೆ ಹಾಗೂ ವಾರ್ಷಿಕ ಆದಾಯವು ಇದಕ್ಕಿಂತಲೂ ಕಡಿಮೆ ಇರುವ ದೇವಾಲಯಗಳನ್ನೂ ಸೇರಿದಂತೆ ಒಟ್ಟು 25,854 ದೇವಸ್ಥಾನಗಳಿಗೆ ಪ್ರಸ್ತುತ ವಾರ್ಷಿಕವಾಗಿ ಕನಿಷ್ಟ ರೂ.48,000/-ಗಳ ತಸ್ತೀಕ್‌ನ್ನು ನೀಡಲಾಗುತ್ತಿದೆ.</td>
</tr>
<tr>
<td>ಈ)</td>
<td>'ಸಿ' ವರ್ಗದ ಮುಜರಾಯಿ ದೇವಾಲಯಗಳ ಅರ್ಚಕ ವರ್ಗಕ್ಕೆ ತಲಾ ಮಾಸಿಕ 15 ಸಾವಿರ ರೂ. ವೇತನ (ತಸ್ತೀಕ್ ಸೇರಿದಂತೆ) ನೀಡಬೇಕೆಂಬ ಸರ್ಕಾರ ನೀಡಿದ ವಾಗ್ದಾನ ಈಡೇರಿದೆಯೇ:</td>
<td rowspan="2">ಧಾರ್ಮಿಕ ದತ್ತಿ ಆಯುಕ್ತರ ಕಾರ್ಯಾಲಯದಲ್ಲಿ 'ಸಿ' ವರ್ಗದ ಮುಜರಾಯಿ ದೇವಾಲಯಗಳ ಅರ್ಚಕ ವರ್ಗಕ್ಕೆ ತಲಾ ಮಾಸಿಕ 15 ಸಾವಿರ ರೂ. ವೇತನ (ತಸ್ತೀಕ್ ಸೇರಿದಂತೆ) ನೀಡಬೇಕೆಂಬ ಬಗ್ಗೆ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.</td>
</tr>
<tr>
<td>ಉ)</td>
<td>ಯಾವ ಕಾಲಮಿತಿಯೊಳಗೆ ಸಿ ವರ್ಗದ ಅರ್ಚಕರಿಗೆ 15 ಸಾವಿರ ವೇತನ ನೀಡಲಾಗುವುದು: ಇದಕ್ಕೆ ತಗಲುವ ವಾರ್ಷಿಕ ಹಣಕಾಸು ಮೊತ್ತ ಎಷ್ಟು:</td>
</tr>
</table>

ಸಂಖ್ಯೆ: ಕಂಇ 04 ಮುಸಪು 2022

(ಶಶಿಕಲಾ. ಅ. ಜೊಲ್ಲೆ)
ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು